# ಬಿ.ಎಸ್.ಎನ್.ಎಲ್.ನೌಕರರ ಹೌಸಿಂಗ್ ಸಹಕಾರ ಸಂಘ (ನಿ)

**ಮನೆ ನಂಬರ್ 1511,'ಸಿ' ಅಂಡ್ 'ಡಿ' ಬ್ಲಾಕ್,ಸಂಜೆ ರವಿ ರೋಡ್,ಕುವೆಂಪುನಗರ, ಮೈಸೂರು-570023**

---

## 2024-20245 ನೇ ಸಾಲಿನ ಮಹಾಸಭೆಯ ನಡವಳಿಕೆಗಳು

ದಿನಾಂಕ :21/09/2025ರ ಭಾನುವಾರ ಬೆಳಗ್ಗೆ 11 ಗಂಟೆಗೆ "ಶ್ರೀ ನಟರಾಜ ಪ್ರಾರ್ಥನಾ ಮಂದಿರ" (ಸಭಾ ಭವನ) ದಲ್ಲಿ, ಫೋರ್ಟ್ ಮೊಹಲ್ಲಾ ಮೈಸೂರು-570 004 ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ನಡೆಸಿದ 2024-2025ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳು.

ಹಾಜರಿ:- ಸಭೆಗೆ 308 ಸದಸ್ಯರು ಹಾಜರಾಗಿದ್ದು ಹಾಜರಾತಿಯನ್ನು ಪ್ರತ್ಯೇಕವಾಗಿ ದಾಖಲಿಸಲಾಗಿದೆ.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಪ್ರಾರ್ಥನೆ | ಸಂಘದ ಸದಸ್ಯರಾದ ಶ್ರೀಮತಿ ಎಸ್ ಎನ್ ಭಾಗ್ಯ ರವರಿಂದ ದೇವತಾ ಪ್ರಾರ್ಥನೆಯೊಂದಿಗೆ ಮಹಾಸಭೆಯು ಪ್ರಾರಂಭವಾಯಿತು. |
| 2 | ಸ್ವಾಗತ | ಸಂಘದ ನಿರ್ದೇಶಕರಾದ ಶ್ರೀ ಜಿ.ಶೇಖರಮೂರ್ತಿಯವರು ಸಭೆಯನ್ನು ಉದ್ದೇಶಿಸಿ, ಮಹಾಸಭೆಯನ್ನು ಪ್ರಾರಂಭ ಮಾಡುವ ಮುನ್ನ,2024-25ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ನಡೆಸಿಕೊಡಬೇಕೆಂದು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ.ಎನ್.ಡಿ.ಸುಂದರ್ ರವರಿಗೆ ,ವೇದಿಕೆ ಮೇಲೆ ಉಪಸ್ಥಿತರಾಗಿರುವ ಸಂಘದ ಪಾದಾಧಿಕಾರಿಗಳಿಗೆ ಹಾಗೂ ಸಭೆಯಲ್ಲಿ ಭಾಗವಹಿಸಲು ಆಗಮಿಸಿರುವ ಸದಸ್ಯರಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ, ಮಹಾಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ರಚನಾತ್ಮಕ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಎಲ್ಲರಿಗೂ ಮನವಿ ಮಾಡಿದರು. |
| 3 | ನಿಧನ ಹೊಂದಿದವರಿಗೆ ಸಂತಾಪ ಸೂಚನೆ:- | ಅಧ್ಯಕ್ಷರಾದ **ಶ್ರೀ ಎನ್.ಡಿ.ಸುಂದರ್** ರವರು ನಮ್ಮ ಸಂಘದ ಮಾಜಿ ನಿರ್ದೇಶಕರಾದ ದಿ// **ಶ್ರೀಮತಿ ವಿ ಶಶಿಕಲಾ** ರವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಈ ಸಮಯದಲ್ಲಿ ಶ್ಲಾಘಿಸುತ್ತಾ, ಸಂಘದ ಆಡಳಿತ ಮಂಡಳಿಯ ಪರವಾಗಿ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇವೆ ಹಾಗೂ ಸಂಘದ ಸದಸ್ಯರಾದ **ದಿ//ಹೆಚ್ ಹೆಚ್ ಕುಬೇರ, ದಿ//ಲಕ್ಷ್ಮಣ್, ದಿ//ಶಿವನಂಜಪ್ಪ ಎಸ್ ಎನ್, ದಿ//ಎನ್ ಜಯಪ್ರಕಾಶ್, ದಿ// ಕೆ ಮೋಹನ್, ದಿ// ಎಮ್ ಬಿ ಗುರುಮೂರ್ತಿ**, ಇವರು<br><br>2024-2025ನೇ ಸಾಲಿನಲ್ಲಿ ನಿಧನ ಹೊಂದಿರುವ ಸದಸ್ಯರ ಹೆಸರನ್ನು ಸಭೆಯಲ್ಲಿ ಮಂಡಿಸಿ , ಹೆಸರು ತಪ್ಪಿದ್ದಲ್ಲಿ ಈ ಕೂಡಲೇ ಸಭೆಗೆ ತಿಳಿಸಬೇಕೆಂದು ಸೂಚಿಸಿದರು. ಯಾರು ಹೆಸರನ್ನು ಸೂಚಿಸದ ಕಾರಣ ಸಭಾಧ್ಯಕ್ಷರು ಸಂಘದ ಗಮನಕ್ಕೆ ಬಾರದೆಯಿರುವ ಸದಸ್ಯರ ಹೆಸರು ತಪ್ಪಿದ್ದಲ್ಲಿ ಅವರಿಗೂ ಸಭೆಯಲ್ಲಿ ಒಂದು ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಿದರು. |
| 4 | ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು:- | ವಾರ್ಷಿಕ ಮಹಾಸಭೆಯ ಬಗ್ಗೆ ಸದಸ್ಯರಿಗೆ ಸಂಘವು ನೀಡಲಾದ ಸೂಚನಾ ಪತ್ರವನ್ನು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು. ಸಭೆಯು ಸರ್ವಾನುಮತದ ಒಪ್ಪಿಗೆ ಮೇರಿಗೆ ಸಂಘದ 2024-25ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ದಾಖಲು ಮಾಡಲಾಯಿತು. |

<table>
<tr><td>5.</td><td>ದಿನಾಂಕ:08/09/2024ರ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು:-</td><td>ಸಂಘದ ನಿರ್ದೇಶಕರಾದ ಶ್ರೀ.ಎ.ಪ್ರಕಾಶ್ ರವರು ದಿನಾಂಕ:-08/09/2024 ರಂದು ನಡೆದ 2023-2024ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು.<br>ಸಭೆಯು ಸರ್ವಾನುಮತದ ಒಪ್ಪಿಗೆ ಮೇರೆಗೆ 2023-24ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ದಾಖಲು ಮಾಡಲಾಯಿತು.</td></tr>
<tr><td>6</td><td>ಸಂಘದ 2024-25 ನೇ ಸಾಲಿನ ಆಡಳಿತ ವರದಿ</td><td>ಸಂಘದ 2024-25ನೇ ಸಾಲಿನ ಆಡಳಿತ ವರದಿಯನ್ನು ನಿರ್ದೇಶಕರಾದ ಶ್ರೀ ಬಿ.ಎನ್ ಗಂಗಾಧರ ರವರು ಸಭೆಯಲ್ಲಿ, ಮಂಡಿಸಿ ಸಭೆಯ ಅನುಮೋದನೆ ಕೋರಿದರು.<br><br>ಸಭೆಯು ಸಂಘದ 2024-25ನೇ ಆಡಳಿತ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.</td></tr>
<tr><td>7</td><td>ಸಂಘದ 2024-25ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳ ಮಂಡನೆ ಹಾಗೂ ಅಂಗೀಕಾರ</td><td>ಸಂಘದ 2024-25ನೇ ಸಾಲಿನ ಆಡಿಟ್ ಆದ ಜಮಾ-ಖರ್ಚು, ಲಾಭ-ನಷ್ಟ, ಆಸ್ತಿ ಜವಾಬ್ದಾರಿ ಲೆಕ್ಕ ತಃಖ್ತೆಗಳು ಹಾಗೂ ವರದಿಯನ್ನು ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್‌ರವರು ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು. ಹಾಗೂ<br><br>ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಂಘದ ಲೆಕ್ಕ ತ;ಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ ಕ್ರ ಮ ಸಂ:10 ಹಿಂದಿನಂತೆ ಬರತಕ್ಕ ಬಾಕಿಗಳಲ್ಲಿ ಇತರೆ ಲೆಕ್ಕಗಳು ಟಿ ಡಿ ಎಸ್ 13-14ನೇ ಸಾಲಿವ ಬ್ಯಾಂಕ್ ಠೇವಣಿಗಳ ಮೇಲಿನ ಟಿ ಡಿ ಎಸ್ ಬಾಬ್ತು ರೂ/-3,64,946 ಗಳನ್ನು ಬಡ್ಡಿ ಜಮ್ಮ ತೆಗೆದುಕೊಂಡು ಟಿ ಡಿ ಎಸ್ ಬರಲು ಬಾಕ್ಕಿ ಎಂದು ಖರ್ಚ್ಚು ತೋರಿಸಿದ ಬಾಬ್ತು ಮುಂದಿನ ಸಾಲುಗಳಲ್ಲಿ ಆದಯ ತೇರಿಗೆ ಇಲಾಖೆಯಿಂದ ಸಂಘದ ಲೆಕ್ಕಕ್ಕೆ ಜಮವಾಗದೆ ಆಸ್ತಿ ಜವಾಬ್ದಾರಿ ತ;ಖ್ತೆಯಲ್ಲಿ ತಹಲ್‌ವರೆಗೆ ಮುಂದುವರೆದಿರುತ್ತದೆ,ಈ ಬಗ್ಗೆ ತೇರಿಗೆ ಲೆಕ್ಕಪರಿಶೋಧಕರ ಸದರಿ ಮೋಬಲಗು ಸಂಘದ ಜಮಕ್ಕೆ ಬಾರುವುದಿಲ್ಲವಾದರಿಂದ ಹೊಂದಾಣಿಕೆ ಮೂಲಕ ಲೆಕ್ಕವನ್ನು ಖೈದುಗೊಳಸಲು ಸೂಚಿಸಿರುವ ಮೇರೆಗೆ ಆಡಳಿತ ಮಂಡಳಿಯಲ್ಲಿ ಈ ಬಗ್ಗೆ ಚರ್ಚ್ಚಿಸಿ ಮಹಾಸಭೆಯಲಿ ವಸೂಲಾತಿ ಲೆಕ್ಕ ತಃಖ್ತೆಯಿಂದ ಕೈಬಿಡುವ ಬಗ್ಗೆ. ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.
<table>
<tr><td>10</td><td><u>ಹಿಂದಿನಂತೆ ಬರತಕ್ಕ ಬಾಕಿಗಳು :-</u></td><td></td></tr>
<tr><td></td><td>ಇತರೆ ಲೆಕ್ಕಗಳು ಟಿಡಿಎಸ್-13-14ನೇ ಸಾಲು</td><td>364,946.00</td></tr>
</table>
ಸಂಘದ 2024-25ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳನ್ನು ಮತ್ತು ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು. ಸಂಘದ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ ಕ್ರ.ಸಂ:10ರ ಹಿಂದಿನಂತೆ ಬರತಕ್ಕ ಬಾಕಿಗಳಲ್ಲಿ ,ಇತರೆ ಲೆಕ್ಕಗಳು ಟಿಡಿಎಸ್-13-14ನೇ ಸಾಲು 364,946.00 ವಸೂಲಾತಿ ಲೆಕ್ಕ ತಃಖ್ತೆಯಿಂದ ಕೈಬಿಡುವ ಬಗ್ಗೆ. ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.</td></tr>
<tr><td>8</td><td>ಸಂಘದ 2024-25ನೇ ಸಾಲಿನ ಲಾಭ ವಿಲೇವಾರಿ</td><td>ಸಂಘವು 2024-25ನೇ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ: 1,17,647.76/- ಗಳನ್ನು ಕೆಳಕಂಡಂತೆ ವಿಲೇವಾರಿ ಮಾಡಲು ಸಭೆಯ ಅನುಮೋದನೆಗಾಗಿ ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಯಲ್ಲಿ ಮಂಡಿಸಿದರು.
<table>
<tr><td>ಅಪದ್ಧನ ನಿಧಿ, ಶೇಕಡ 25</td><td>ರೂ.29,411.94</td></tr>
<tr><td>ಸಹಕಾರ ವಿದ್ಯಾನಿಧಿ, ಶೇಕಡ 2</td><td>ರೂ.1,764.82</td></tr>
<tr><td>ಸದಸ್ಯರ ಷೇರಿನ ಮೇಲೆ ಲಾಭಾಂಶ ಶೇಕಡ</td><td>ರೂ.-</td></tr>
</table></td></tr>
</table>

| | | |
|---|---|---|
| | | ನೌಕರರಿಗೆ ಬೋನಸ್ — ರೂ.24,000.00<br>ನಿವೇಶನ ನಿರ್ವಹಣಾ ವೆಚ್ಚದ ನಿಧಿ — ರೂ. 62,471<br>ಸಂಘದ 2024-25ನೇ ಸಾಲಿನ ಲಾಭ ವಿಲೇವಾರಿಗೆ ಸಭೆಯು ತನ್ನ ಅನುಮೋದನೆ ನೀಡಿತು. |
| 9 | ಸಂಘದ 2025-26ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ | 2025-26ನೇ ಸಾಲಿಗೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ಜಿ.ಶೇಖರಮೂರ್ತಿಯವರು ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು. |

| ಕ್ರ.ಸಂ | ಅಂದಾಜು ಆದಾಯ | ರೂ. | ಅಂದಾಜು ವೆಚ್ಚ | ರೂ. |
|---|---|---|---|---|
| 1. | ಠೇವಣಿ ಮೇಲೆ ಬಡ್ಡಿ | 8,00,000.00 | *ಸಿಬ್ಬಂದಿ ವೆಚ್ಚ | 3,24,000.00 |
| | | | *ಬಾಡಿಗೆ | 1,98,000.00 |
| 2. | ಇತರೆ ಮೂಲಗಳಿಂದ | 4,50,000.00 | *ದೂರವಾಣಿ ವೆಚ್ಚ | 18,000.00 |
| | | | *ವಿದ್ಯುತ್ ವೆಚ್ಚ | 15,000.00 |
| | | | *ಅಂಚೆ ವೆಚ್ಚ | 25000.00 |
| | | | *ಮುದ್ರ ಣ ಲೇಖನಸಾಮಗ್ರಿ | 20,000.00 |
| | | | *ವಾರ್ಷಿಕ ಮಹಾಸಭೆ ವೆಚ್ಚ | 2,50,000.00 |
| | | | *ನ್ಯಾಯವಾದಿಗಳ ಶುಲ್ಕ | 50,000.00 |
| | | | *ಪ್ರ ಯಾಣ ವೆಚ್ಚ | 25,000.00 |
| | | | *ಜಾಹೀರಾತು ವೆಚ್ಚ | 25,000.00 |
| | | | *ಕಚೇರಿ ನಿರ್ವಹಣೆ ವೆಚ್ಚ ಮತ್ತು ಆಡಳಿತಾತ್ಮಕ ವೆಚ್ಚ | 2,50,000.00 |
| | | | *ಅಂದಾಜು ಲಾಭ | 50,000.00 |
| | ಜುವ ಸ್ಲಾ ರ ೂ. | **12,50,000.00** | ಜುವ ಸ್ಲಾ ರ ೂ. | **12,50,000.00** |

ಸಭೆಯು ಮೇಲ್ಕಂಡ 2024-25ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸರ್ವಾನುಮತದಿಂದ ಮಂಜೂರು ಮಾಡಿತು.

| | | |
|---|---|---|
| 10 | ಸಂಘದ 2025-26ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಬಗ್ಗೆ | 2025-26ನೇ ಸಾಲಿನ ಲೆಕ್ಕ ಪತ್ರಗಳನ್ನು ,ಲೆಕ್ಕಪರಿಶೋಧನೆ ಮಾಡಲು ಶ್ರೀ.ಎಂ ಆರ್ ಜಗದೀಶ್ ರಾವ್ ಮನೆ :371/ಎ,ಸಿ ಎಚ್ -34/ಆಫ್,3ನೇ ಮಹಡಿ,ಪ್ರೆಸ್ಟೀಜ್ ಶಾಪಿಂಗ್ ಆರ್ಕೇಡ್,ಚಾಮರಾಜ ಡಬಲ್ ರೋಡ್,ಮೈಸೂರು-570 024ರವರನ್ನು ನೇಮಕ ಮಾಡಿಕೊಳ್ಳಲು ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಯ ಅನುಮೋದನೆ ಕೋರಿದರು ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು. |

| | | |
|---|---|---|
| 11 | ಇತರೆ ವಿಷಯಗಳಿದ್ದಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ | (ಅ). ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಗೆ 4ನೇ ಮತ್ತು 5ನೇ ಹಂತಕ್ಕೆ ಸಂಬಂದಿಸಿದಂತೆ ಮಾಹಿತಿಯನ್ನು ವಿವರಿಸುತ್ತೇನೆ ನಂತರ ಸದಸ್ಯರಿಗೆ ಈ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಕೇಳಿ ಉತ್ತರ ಪಡೆಯಬಹುದು ಎಂದು ತಿಳಿಸಿ ಕೆಳಕಂಡ ಮಾಹಿತಿಯನ್ನು ನೀಡಿದರು.<br>➢ <u>ಯೋಜಿತ 5ನೇ ಹಂತ</u>:<br><br>ಉದ್ದೇಶಿಸಲಾಗಿರುವ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿ ಸರ್ವೆ ನಂ: 34/1ಎ, 34/1ಬಿ, 34/2, 34/3, 34/4, 34/4ಎ, 34/5ಬಿ, 34/8ಎ, 34/9, 192/2, 192/3, 193/3, 193/4, 193/5, 193/6, 194/1ಬಿ, 194/1ಎ2, 213/3, 194/1ಎ1, 200/1, 200/2, 200/3, 200/6, 206/1ಎ1, 206/3, 213/1, 214/3, 216, 217/1, 217/2, 217/3ರಲ್ಲಿ 39ಎಕರೆ 35.5ಗುಂಟೆ ಜಮೀನಿನನ್ನು ನಕ್ಷೆ ಅನುಮೋದನೆಗೊಂಡಿದ್ದು , ನಕ್ಷೆ ಬಿಡುಗಡೆ ಆದೇಶ ಸಂಖ್ಯೆ:-ಮೈ. ನ. ಪ್ರಾ: ನ ಯೋ ಶಾ: ವಿನ್ಯಾಸ: 55: 2021-22, ದಿನಾಂಕ:7-8-2021 ರಂದು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರವರಿಂದ ವಸತಿ ವಿನ್ಯಾಸ ನಕ್ಷೆಯ ಅನುಮತಿ ಆದೇಶ ಬಿಡುಗಡೆಯಾಗಿರುತ್ತದೆ.<br><br>39ಎಕರೆ 35.5ಗುಂಟೆ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಲಾಗಿದೆ. ಹಾಗು ಮೂಲೆ ನಿವೇಶನಗಳನ್ನು ಹರಾಜಿನ ಮೂಲಕ ಸದಸ್ಯರಿಗೆ ಹಂಚಿಕೆ ಮಾಡಲಾಗಿದೆ.<br>ಸಿವಿಲ್ ಕಾಮಗಾರಿಗಳು ,ಒಳಚರಂಡಿ ,ನೀರು,ಉದ್ಯಾನವನ, ಸಿ.ಎ.ನಿವೇಶನ, ರಸ್ತೆ, ವಿದ್ಯುತ್ ಈ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ ಹಾಗು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು,ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅದೇಶ ಸಂಖ್ಯೆ: ಮೈನಪ್ರಾ:ನಯೋಶಾ:ವಿನ್ಯಾಸ: 20 :2025-26 ದಿನಾಂಕ 25/4/2025 ರಂದು ಒಟ್ಟು 39 ಎಕರೆ 39.05 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರವು ಅಂತಿಮ ಅನುಮೋದನೆ ನೀಡಿದ್ದು, ಸಂಘದ ಹೆಸರಿಗೆ ಖಾತೆ ವರ್ಗಾವಣೆಗೊಂಡು ನಿವೇಶನಗಳನ್ನು ಸದಸ್ಯರಿಗೆ ನೊಂದಣಿ ಮಾಡುವ ಪ್ರಕ್ರಿಯೆ ಪ್ರಾರಂಭಗೊಂಡಿದೆ<br><br>ವಾಜಮಂಗಲ ಗ್ರಾಮದ ಸರ್ವೆ ನಂಬರ್ 139/1, 141/3,142/3, 183/4,183/5,183/6,183/7,183/9 & 194/3 ರಲ್ಲಿ ಒಟ್ಟು 6 ಎಕರೆ 04 ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು,ಹಾಗು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುತ್ತದೆ. ಬಡಾವಣೆಯಲ್ಲಿ ಸಿವಿಲ್ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿದೆ.<br><br>ವಾಜಮಂಗಲ ಗ್ರಾಮದ ಸರ್ವೆ ನಂಬರ್:134/2,215/2,ರಲ್ಲಿ ಒಟ್ಟು ಗುಂಟೆ ಒಟ್ಟು 3 ಎಕರೆ 09. ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು ,ಹಾಗು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಅದೇಶ ಸಂಖ್ಯೆ: ಮೈನಪ್ರಾ:ನಯೋಶಾ:ವಿನ್ಯಾಸ: 29 :2025-26 ದಿನಾಂಕ 25/4/2025 ರಂದು ಒಟ್ಟು 3 ಎಕರೆ 09. ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನಿಮೋದನೆ ನೀಡಾಲಾಗಿದೆ. ಹಾಗು ಬಡಾವಣೆಯಲ್ಲಿ ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿದೆ. ಬಾಕಿ ಉಳಿದ ನಿವೇಶನಾಕಾಂಕ್ಷಿಗಳಿಗೆ ಸದಸ್ಯರ ಜೇಷ್ಠತೆಗೆ ಅನುಗುಣವಾಗಿ ದಿನಾಂಕ:30/08/2025ರಂದು "ನನ್ನ ನಿವೇಶನ ನನ್ನ ಆಯ್ಕೆ" ಎಂಬ ಅಭಿಯಾನದೊಂದಿಗೆ,ಜಮೀನುಗಳಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಲಾಗಿದೆ. ಹಾಗು ಮೂಲೆ ನಿವೇಶನಗಳನ್ನು ಹರಾಜಿನ ಮೂಲಕ ಸದಸ್ಯರಿಗೆ ಹಂಚಿಕೆ ಮಾಡಲಾಗಿದೆ. |

| | | |
|---|---|---|
| | | ➢ ಯೋಜಿತ 7ನೇ ಹಂತ:<br>7ನೇ ಹಂತದ ಹೊಸ ಬಡಾವಣೆ ನಿರ್ಮಿಸುವ ಬಗ್ಗೆ ಮಹಾಸಭೆಯ ಅನುಮೋದನೆ ಪಡೆದಿದ್ದು, ಮೈಸೂರು ತಾಲ್ಲೂಕು,ಜಯಪುರ(ಹೋ),ಉದ್ಬೂರು(ಗ್ರಾ) ಸರ್ವೆ ನಂ.113/2,3,154/2,156,157,158,210, ಮತ್ತು ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು ವಿಸ್ತೀರ್ಣ 25 ಎಕರೆ ಜಮೀನಿಗೆ ಬೇಟಿ ನೀಡಿ, ಈ ಜಮೀನನ್ನು ಸಂಘವು ಹುಡುಕುತ್ತಿದ್ದ ವ್ಯಾಪ್ತಿಯಲ್ಲಿ ಲಭ್ಯವಿದ್ದು ಜೊತೆಗೆ ಉದ್ಬೂರು ಮಾನಂದವಾಡಿ ಮುಖ್ಯ ರಸ್ತೆಯಿಂದ ಕೇವಲ 1 ಕಿ,ಮೀ ಒಳಗೆ ಇರುತ್ತದೆ ಮತ್ತು ಬಡಾವಣೆಯನ್ನು ವಸತಿ ನಿರ್ಮಾಣಮಾಡಲು ಯೋಗ್ಯವಾಗಿರುವ ಕಾರಣ, ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಗುತ್ತಿಗೆದಾರರಾದ “ಆರ್.ವಿ.ವೈ.ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್” #ಎಂ.ಐ.ಜಿ.-43,ವಿವೇಕಾನಂದ ಸರ್ಕಲ್,ಮುಖ್ಯ ರಸ್ತೆಯ, ಕರ್ನಾಟಕ ಬ್ಯಾಂಕ್ ಎದುರು, ಮೈಸೂರು-23 ರವರನ್ನು ನೇಮಿಸಿಕೊಂಡು ,ಕರಾರುಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು, ದಿನಾಂಕ:07/02/2024 ರಂದು ಸಂಘದ ಜೊತೆಯಲ್ಲಿ ಕರಾರುಮಾಡಿಕೊಳ್ಳಲಾಯಿತ್ತು. ಪ್ರಸ್ತುತ ನೂತನ ಬಡಾವಣೆಗೆ ನೂತನ ಸದಸ್ಯರು ಅರ್ಜಿಸಲ್ಲಿಸುತ್ತಿದ್ದು ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರು<br>ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಿದ್ದು. ಸಲ್ಲಿಸಿದ ಜಮೀನಿನ ದಾಖಲಾತಿಗಳನ್ನು ಕಾನೂನುಬದ್ಧ ಅಭಿಪ್ರಾಯ(**legal opinion**) ತಿಳಿಯಲು ಸಂಘವು ವಕೀಲರಿಗೆ ನೀಡಲಾಗಿದೆ.<br>ಯೋಜಿತ 7ನೇ ಹಂತದ ಬಡಾವಣೆಯ ಕೆಲಸಗಳು ವಿಳಂಬಗೊಂಡಿದ್ದು ಸಂಘಕ್ಕೆ 7ನೇ ಹಂತದ ಸದಸ್ಯರ ಒತ್ತಡವು ಹೆಚ್ಚಾಗುತ್ತಿದೆ, ಈ ಸಂಬಂಧ ಸಂಘವು ಪರ್ಯಾಯ ಜಮೀನುಗಳನ್ನು ಪಡೆದು 7ನೇ ಹಂತದ ಸದಸ್ಯರಿಗೆ ನಿವೇಶನಗಳನ್ನು ನೀಡುವ ಬಗ್ಗೆ ಮಹಾಸಭೆಯ ಅನುಮೋದನೆ ಕೋರಿದರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.<br>ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಂಘಕ್ಕೆ ಪೂರ್ತಿ ಹಣಪಾವತಿಸದೆ ಉಳಿದಿರುವ ಸದಸ್ಯರು ತಾವು ಪಾವತಿಸಿರುವ ಹಣವನ್ನು ಹಿಂಪಡೆಯುವಂತೆ ಸೂಚಿಸಲಾಯಿತು ಇಲ್ಲವಾದಲ್ಲಿ ಸದಸ್ಯರು ನಿವೇಶನದ ಆಕಾಂಕ್ಷೆ ಇದ್ದಲ್ಲಿ 7ನೇ ಹಂತದ ನಿವೇಶನ ಮುಂಗಡದ ಬಾಕಿ ಹಣವನ್ನು ಮೊತ್ತವನ್ನು ಪಾವತಿಸಿ ನಿವೇಶನವನ್ನು ಹೊಂದಬಹುದು ಎಂದು ತಿಳಿಸಿ ಮಹಾಸಭೆಯ ಅನುಮೋದನೆ ಕೋರಿದರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು., |
| 12 | ವಂದನಾರ್ಪಣೆ. | ಸಂಘದ ಆಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಯು ಯಶಸ್ವಿಯಾಗಿ ನಡೆಯಲು ಸಭೆಗೆ ಹಾಜರಾಗಿ ಸಹಕರಿಸಿದ ಸದಸ್ಯರುಗಳಿಗೆ ಹಾಗೂ ನಮ್ಮ ಸಂಘದ ಜೊತೆಯಲ್ಲಿ ಹಲವು ವರ್ಷಗಳಿಂದ ವಸತಿ ನಿವೇಶನಗಳನ್ನು ನಿರ್ಮಿಸಿ ಸದಸ್ಯರಿಗೆ ಹಂಚಿಕೆ ಮಾಡಲು ಸಹಕರಿಸಿರುವ ಗುತ್ತಿಗೆದಾರರಾದ ಮೆ॥ ಸ್ಕಿಲ್‌ಟೆಕ್ ಗುತ್ತಿಗೆದಾರರಿಗೆ, ಮೆ॥ಆರ್.ವಿ.ವೈ.ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್” ಮತ್ತು ಗ್ರಾವಿಟಿ 9 ಗುತ್ತಿದಾರರಿಗೆ ಹಾಗೂ ಪೋಲೀಸ್ ಸಿಬ್ಬಂದಿಯವರಿಗು ಮತ್ತು “ ಆರಾಧ್ಯ ಮಹಾಸಭಾ ” ಭವನದ ಸಂಸ್ಥೆಗು ಸಂಘದ ಆಡಳಿತ ಮಂಡಳಿ ಪರವಾಗಿ ವಂದನೆಗಳನ್ನು ಅರ್ಪಿಸಿದರು. |

2024-25ನೇ ಸಾಲಿನ ಮಹಾಸಭೆಯ ಕಾರ್ಯ-ಕಲಾಪಗಳು ಮುಕ್ತಾಯಗೊಂಡವು.

ಸಹಿ.

(ಅಂಜಲಿ ಎ.ಡಿ.)
ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ

“ಯಥಾ ನಕಲು”

ಸಹಿ.

(ಎನ್.ಡಿ.ಸುಂದರ್)
ಅಧ್ಯಕ್ಷರು